Foundel 1917 || ಶ್ರೀ || Regd No M 1299

ಸತ್ಯವಾದಿ

ಅರಮನೆ ಸರಸ್ವೇದಾರ್ ಎಂ. ಪಿ. ಸುಬ್ಬರಾಯರಿಂದ ಪ್ರತಿಷ್ಠಿತಪಾದದು

Proprietors — Satyavadi Ltd, Mysore

ವಾರ್ಷಿಕ ಚಂದಾ ಸ್ಥಳಕ್ಕೆರೂ. 1—0—0

ಪರಸ್ಥಳಕ್ಕೆ ಅಂಚೆ ವೆಚ್ಚ ಸೇರಿ 1—12—0

ಸಂಪುಟ 25 ಸಂಚಿಕೆ 12] ಬುಧವಾರ 19-11-1941 [ಬಿಡಿಪ್ರತಿ 4 ಕಾಸು

NEW OPERA TALKIES

(THE BEAUTY SPOT OF MYSORE)

HIMMAT From 20—11—41

Directed by— ROOP K. SHOREY

Kamala Movitones Production

With

THRILLS ..... LOVE ..... SMASH

Starring—Ragini, Manju Radha Manorama, Beg & others

— ಕಥಾ ಸಾರಾಂಶ —

ಲಾಹೋರಿನ ಕೆಲವು ಮೈಲಿಗಳ ದೂರದಲ್ಲಿ ಒಂದು ಬಿಳ್ಳಿಯ ಗಣಿಯು ಇರುತ್ತದೆ. ಇಲ್ಲಿನ ನಡೆವಳಿಕೆಗಳೆಲ್ಲಾ ಡಕಾಯಿತರ ಗುಂಪಿನಲ್ಲಿರತಕ್ಕವು. ಪಕ್ಕದ ಹಳ್ಳಿಯಿಂದ ಕುಮಾರ್ ಮತ್ತು ಮಂಜು ಎಂಬುವರು ಈ ಡಕಾಯಿತರ ಸೊಕ್ಕನ್ನು ಮುರಿಯಲು ಹೋಗಿ ಸಿಕ್ಕಿಕೊಳ್ಳುವರು. ಆದರೆ ಹೇಗೋ ತಪ್ಪಿಸಿಕೊಂಡು ಬರುವರು. ಗಣಿಯ ಮ್ಯಾನೇಜರಾದ ಸತೀಶನ ಡಕಾಯಿತರ ಜೊತೆಯಲ್ಲಿ ಸೇರಿಕೊಂಡು ಆಟವಾಡುತ್ತ ಇರಲು, —ಕುಮಾರು, ಮಂಜು ಎಂಬುವರು ಗಣಿಯೊಳಕ್ಕೆ ಹೋಗುವರು,

ಕುಮಾರಸಂತೆ ವೇಶವನ್ನು ಧರಿಸಿ ಮತ್ತೊಬ್ಬ ಡಕಾಯಿತನು ಅವರನ್ನು ಹಿಂಬಾಲಿಸುವನು. ಗಣಿಯ ಮ್ಯಾನೇಜರ್ ಪ್ರೇಮಿ ಲೀಲಳ ತಂಗಿ ಮನೋರಮೆಯು ಇವರೀರ್ವರಿಗೂ ಆಹಾರ ಕೊಡುವಳು. ಮುಂದೆ ಕೆಲವು ಅಪಾಯ ಸನ್ನಿವೇಶಗಳಲ್ಲಿ ಇವರೀರ್ವರೂ ಮನೋರಮಳ ಅಕ್ಕನನ್ನು ಡಕಾಯಿತರಿಂದಬಿಡಿಸುವರು. ಇದೇ ಲೀಲಳಿಗೂ.....ಕುಮಾರ್‌ನಿಗೂ .....ಪ್ರೇಮ ಬೆಳೆಯಲು ಸಂದರ್ಭಗಳು! ಆದರೆ ಲೀಲಳು ಮ್ಯಾನೇಜರ್ ಸತೀಶನ ಕೈಬೊಂಬೆಯಾಗಿರುವಳು. ಸತೀಶನ ಧರ್ಮಪತ್ನಿ ರಾಧೆಯು ಲೀಲಳನ್ನು ಬಹಳವಾಗಿ ಪ್ರಾರ್ಥಿಸಿ, ತನ್ನ ಗಂಡನನ್ನು ಮದುವೆಯಾಗಲು ಯತ್ನಿಸುವಳು. ಇದು ಆಶ್ಚರ್ಯವಲ್ಲವೆ ?

ಓರ್ವರಾತ್ರಿ ರಾಧ, ಕುಮಾರ್ ಸಂಧಿಸುವರು. ಇದೇ ಸಮಯದಲ್ಲಿ ಸತೀಶ ಮತ್ತು ಲೀಲ ಇವರನ್ನು ಸಂಧಿಸುವರು. ಕೊನೆಗೆ ಕುಮಾರನು ಗಣಿಯಿಂದ ಓಡಿಸಲ್ಪಡುವನು. ಲೀಲಳನ್ನು ನಿರ್ಬಂಧಿಸುವನು.

ಮುಂದೆ ಕುಮಾರ್....ಮಂಜು....ಮನೋರಮ ಇವರ ಪರಿಣಾಮ .... ? ಎಲ್ಲವೂ ರಜತ ಪರದೆಯಮೇಲೆ ನಕ್ಷತ್ರದಂತೆ ಹೊರಬೀಳುವುವು,

QUALITY MILK & MILK PRODUCTS

From Citizens Dairy, Old Post Office Road, Mysore. — Telephone : 492.

ಲೇಟ್ ಮಿ ॥

ಬಿ. ಸಿ. ಅನಂತರಾಮಯ್ಯಂಗಾರ್ಯರು

——

15-10-1941 ನೇ ಬುಧವಾರ ಮಧ್ಯಾಹ್ನ 2 ಘಂಟೆ ಸಮಯದಲ್ಲಿ ಶ್ರೀ ॥ ಬಿ. ಸಿ. ಅನಂತರಾಮಯ್ಯಂಗಾರ್ಯರು ತಮ್ಮ 82 ನೇ ವಯಸ್ಸಿನಲ್ಲಿ ನಿಧನಶರಾದರು. ಇವರು ಬಾಲ್ಯದಲ್ಲಿ ನೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಮಾಡಿ, ಅಲ್ಲಿಗೇನೇ ಜನರಲ್ ವಿದ್ಯಾಭ್ಯಾಸವನ್ನು ನಿಲ್ಲಿಸಿದರಾದರೂ, ತಮ್ಮ ಅಂತ್ಯಕಾಲದ 2 ತಿಂಗಳು ನುಂಚಿನವರೆಗೂ ತಾವು ಜಾಗೃತಾವಸ್ಥೆಯಲ್ಲಿದ್ದ ಪ್ರತಿ ನಿಮಿಷದಲ್ಲಿಯೂ ಜ್ಞಾನಾರ್ಜನೆಯನ್ನು ಮಾಡುತ್ತಲೇ ಇದ್ದರು. ಎಲ್ಲಾ ಶಾಸ್ತ್ರಗಳಲ್ಲಿ ನೈಪುಣ್ಯತೆಯನ್ನು ಪಡೆದಿದ್ದರು.

ಬಾಲ್ಯದಲ್ಲಿ ಬೆಂಗಳೂರಿನಲ್ಲಿ ಒಟ್ಟೇ ಅಂಗಡಿಯನ್ನಿಟ್ಟು ತಾವೇ ಉಡುಪನ್ನು ಕತ್ತರಿಸಿ ಹೊಲಿಯುವುದಕ್ಕೆ ಕೊಡುತ್ತಿದ್ದರು, ಇವರಿಗೆ ದ್ರವ್ಯಾರ್ಜನೆಯ ವೇಳೆಲೆ ಸ್ವಲ್ಪವೂ ಪ್ರೇಮವಿರಲಿಲ್ಲ. ಬಾಲ್ಯದಿಂದಲೂ ಮನೆಯ ತುಂಬ ಜನಗಳನ್ನಿಟ್ಟುಕೊಂಡು ಅವರುಗಳಿಗೆ ಷೋಡಷೋಪಚಾರಗಳಿಗೇ ವ್ಯಯಮಾಡುತ್ತಿದ್ದರು,

ಕೆಲವು ಕಾಲಾನಂತರ ಚನ್ನರಾಯಪಟ್ಟಣ ತಾಲ್ಲೂಕು ದಡದಹಳ್ಳಿಯಲ್ಲಿ ಒಂದು ವ್ಯವಸಾಯ ಕ್ಷೇತ್ರವನ್ನು ಸ್ಥಾಪಿಸಿದರು. ಬೆಂಗಳೂರಿನಲ್ಲಿ ಬಹಳ ಉನ್ನತ ಸ್ಥಿತಿಗೆ ಬಂದಿದ್ದ ಜವಳಿ ಅಂಗಡಿಯನ್ನು ತಮ್ಮ ತಮ್ಮಂದಿರು ಶ್ರೀ॥ ಕೆ. ಎಸ್. ನರಸಿಂಹಯ್ಯಂಗಾರ್ಯರಿಗೆ ವಹಿಸಿ ದಡದಹಳ್ಳಿಗೆ ಬಂದರು.

ಬಲ್ಲಿ ಪ್ರತಿಯೊಂದು ವ್ಯವಸಾಯದ ಕಾರ್ಯಕಲಾಪವನ್ನೂ ಬೋರೇಗೌಡನ ಹಳ್ಳೇ ಪದ್ಧತಿಯನ್ನು ಬಿಟ್ಟು ನೂತನರೀತಿಯಲ್ಲಿ ಕೆಲಸಮಾಡುತ್ತಾ ಪರೀಕ್ಷಾ ಕ್ಷೇತ್ರದಂತೆ ಈ ಸಾಂಕ್ಯದ ಎಷ್ಟೋ ರೈತರಿಗೆ ಆದರ್ಶಪ್ರಾಯರಾಗಿದ್ದರು ದಡದಹಳ್ಳಿಯಲ್ಲಿ ತಾವು ವ್ಯವಸಾಯ ಕ್ಷೇತ್ರದಲ್ಲಿದ್ದಾಗ ಇವರ ಪೂರ್ವಸ್ನೇಹಿತರಾದ ಮಿ॥ ಹೌಜೇ ಇಸ್ಮಾಲ್ ಸೇಟರ ಕೋರಿಕೆಯಂತೆ 3 ವರ್ಷ ಕಾಲ ಮಾರಿಕಣಿವೆಯಲ್ಲಿ ಅವರ ಕ್ಷೇತ್ರದ ಜನರಲ್ ಮ್ಯಾನೇಜರಾಗಿದ್ದು ಅಲ್ಲಿ ಕೆಲಸಗಾರರಿಂದಲೂ, ಯಜಮಾನರಿಂದಲೂ ಹೊಗಳಿಸಿಕೊಂಡುಬಂದರು.

ನಂತರ ಇವರು ಚನ್ನರಾಯಪಟ್ಟಣದ ತಾಲ್ಲೂಕು ಬೋರ್ಡಿನ ನೈಸ್‌ಪ್ರಸಿಡೆಂಟರಾಗಿಯೂ, ಡಿಸ್ಟ್ರಿಕ್ಟ್‌ಬೋರ್ಡು ಮೆಂಬರಾಗಿಯೂ. ಬೆಂಚ್ ಕೋರ್ಟು ಜೇರ್ಮನ್ನರಾಗಿಯೂ 7 ವರ್ಷ ಕಾಲ ಕೆಲಸ ಮಾಡಿ, ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಸಿವಾಸಿಗಳ ಮತ್ತು ಅಧಿಕಾರಿಗಳ ಮೆಚ್ಚಿಗೆಗೆ ಪಾತ್ರರಾದರು.

ಇವರ ಮನಶ್ಯಾಂತತೆಯೂ ಮಹಾತ್ಮರ ಮನಶ್ಯಾಂತತೆಯೂ ಒಂದೇಸಮನೆಂದು ಧಾರಾಳವಾಗಿ ಹೇಳಬಹುದು. ಎಂತಹ ಉತ್ಕಟಾವಸ್ಥೆಯಲ್ಲಿಯೂ ಕಠಿಣ ಪ್ರಸಂಗಗಳನ್ನು ಒಹಳ ಶೀಘ್ರವಾಗಿ ಸಮಂಜಸವಾಗಿ ತೀರ್ಮಾನ ಮಾಡುವ ಸ್ಫೂರ್ತಿ ಇವರಲ್ಲಿತ್ತು.

ಆಹಾರ ವ್ಯವಹಾರದಲ್ಲಿ ಗೀತಾವಚನದಂತೆ ಮನಸ್ಸನ್ನು ನಿಗ್ರಹಿಸಿದ್ದರು. ಮಾನಸಿಕ ತಪಸ್ಸನ್ನು ಬಾಲ್ಯದಿಂದಲೂ ಅಭ್ಯಸಿಸಿ ಸಿದ್ಧಿಯನ್ನು ಪಡೆದಿದ್ದರೆಂಬ ಅಂಶವು ಇವರ ಅಂತ್ಯಕಾಲದಲ್ಲಿ ಇವರು ಆಡುತ್ತಿದ್ದ ಹಿತೋಕ್ತಿಗಳಿಂದ ವ್ಯಕ್ತಪಡುತ್ತಿತ್ತು.

ಇವರು ಬಹಳ ಮೇಧಾವಿಗಳು. ಸಂಸ್ಕೃತದಲ್ಲಿ ಸಾಮಾನ್ಯವಾದ ಪಾಂಡಿತ್ಯವಿತ್ತು. ಸಂಸ್ಕೃತ ಭಾಷೆಯ ಸುಪ್ರಸಿದ್ಧ ರಘುವಂಶವನ್ನು ಅದರ ಅರ್ಥವೂ ನೈಪುಣ್ಯತೆಯೂ ಕಡದಂತೆ ತಮ್ಮ ಸ್ವಂತ ಮೇಧಾಶಕ್ತಿಯಿಂದ ಅದನ್ನು ಕನ್ನಡದಲ್ಲಿ ಪದ್ಯರೂಪದಲ್ಲಿ ಕರತಲಾಮಲಕವಾಗಿ ಬರೆದಿಟ್ಟಿರುವರು. ಶೀಘ್ರದಲ್ಲಿಯೇ ಮುದ್ರಿಸಲ್ಪಡುವ ಈ ಗ್ರಂಥವು ಅವರ ಹೆಸರನ್ನು ಚಿರಕಾಲವಿರುವಂತೆ ಮಾಡುವುದರಲ್ಲಿ ಸಂದೇಹವಿಲ್ಲ.

ಇವರಿಗೆ ಒಂಭತ್ತು ಜನ ಗಂಡುಮಕ್ಕಳೂ ಒಂಭತ್ತು ಜನ ಹೆಣ್ಣುಮಕ್ಕಳೂ ಇರುತ್ತಾರೆ. ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನೂ ಇವರ ಮಕ್ಕಳಿಗೆ ಸಮಾಧಾನವನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಹಿಂದುಸ್ಥಾನದ



ಶುದ್ಧ ಗಂಧದ ಸಾಬೂನು
ಮೈಸೂರ್
ಸಾಂಡಲ್‌ಸೋಪ್

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು

The Indian Marriage Gazette

The only illustrated monthly journal of its kind in India containing very interesting and instructive articles on matrimonial topics.

Every home should hsve a copy of this unique journal as it will help to solve the problem of marriage both now and in future,

Annual subscription Rs. 3
Single copy As. 5 in stamps.
Wanted Agents in every town.
Apply to—
The Manager
The Indian Marriage Gazette
Post Box No. 227, Madras

Mr. H. S. RAJAGOPAL
for
Horoscopy
Chamaraj agrahar, Mysore

For Lucious Menu and
Fine Coffee and Tea
Sastry's Coffee Rooms
Chamarajapuram, Mysore

ಸತ್ಯವಾದಿ ವಾರಪತ್ರಿಕೆಗೆ
ಚಂದಾದಾರರಾಗಿರಿ

ಶ್ರೀ ಸುಭಾಷ್‌ಚಂದ್ರ ಬೋಸ್‌ರವರಂಥ ಸ್ವಯುಕ್ತ ಭಾರತೀಯ ವ್ಯಕ್ತಿಗೆ ಇಂಡಿಯಾ ಸರ್ಕಾರದವರು ಕ್ಷಣೆಯನ್ನು ಕೊಡಲಾರದವರಾಗಿರುವದು ಕೇವಲ ವಿಷಾದಕರವಾಗಿದೆ. ಶ್ರೀ ಬೋಸರ ವಿಚಾರದಲ್ಲಿ ಸರಕಾರದ ವರ ಬರಿಯ ಪದಂತಿ ಅಧಾರದ ಮೇಲೆ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ನವೆಂಬರ್ ೧೦ ರಲ್ಲಿ ಕೊಟ್ಟ ವರ್ತಮಾನಗಳು ಸರ್ಕಾರದ ಪ್ರಕಟಣೆ ಇಲಾಖೆಗೆ ಅರ್ಹವಾದವೇ ? ಸರ್ಕಾರವು ಈ ಪದಂತಿಗಳನ್ನು ನಂಬದೆಯೇ ? " ಎಂಬದಾಗಿ ಬಂಗಾಳಾ ಪ್ರಾಂತ ಫಾರ್ವರ್ಡ್ ಬ್ಲಾಕಿನ ಕಾರ್ಯದರ್ಶಿ ಶ್ರೀ ಹೇಮಂತ ಕುಮಾರ ಬೋಸರು ತಿಳಿಸುತ್ತಾರೆ.

ಶ್ರೀಮನ್ಮಹಾರಾಜರವರ ಪ್ರವಾಸ

ನಮ್ಮ ಪ್ರಭುಗಳವರು ಬೆಂಗಳೂರು, ಕೋಲಾರ ಡಿಸ್ಟ್ರಿಕ್ಟ್‌ಗಳಲ್ಲಿ ಸ್ವಲ್ಪ ಕಾಲ ಪ್ರವಾಸ ನಡೆಸಿದರು. ಎಲ್ಲೆಲ್ಲೂ ಪ್ರಜೆಗಳು ರಾಜಭಕ್ತಿ ಪ್ರದರ್ಶನವೂ ರಾಜರವರ ಪ್ರಜಾವಾತ್ಸಲ್ಯವೂ ಕಂಡು ಬಂದಿತು.

ಯುದ್ಧದ ಪರಿಸ್ಥಿತಿ

ರಷ್ಯಾದ ಯುದ್ಧವು ಭೀಕರವಾಗಿಯೇ ನಡೆಯುತ್ತಿದೆ. ರಷ್ಯ ಸೈನಿಕರು ಜರ್ಮನರನ್ನು ಜೋರಾಗಿಯೇ ಪ್ರತಿಭಟಿಸುತ್ತಿದ್ದಾರೆ. ಮಾಸ್ಕೋ ರಣಕ್ಷೇತ್ರದಲ್ಲಿ ಜರ್ಮನರಿಗೆ ಸ್ವಲ್ಪ ಜಯವೂ ಲಭಿಸುತ್ತಿದೆ.

ಅಮೆರಿಕಾ ತಾಟಸ್ಥ್ಯ ಕಾನೂನು ರದ್ದಾದುದರಿಂದ ಅಮೇರಿಕಾ ಯುದ್ಧಕ್ಕೆ ಬೇಗ ಸೇರಿಬಹುದು.

ಪ್ರಸಿದ್ಧಪತ್ರಿಕೆ

ವಿಮಾನದಳಕ್ಕೆ ಸೇರಲಿಚ್ಛಿಸುವ ಉಮೇದುವಾರರನ್ನು ಚುನಾಯಿಸಲು ವಿಮಾನದಳದ ರಿಕ್ರೂಟಿಂಗ್ ಆಫೀಸರವರು, ಬೆಂಗಳೂರಿಗೆ 1941 ನೇ ಇಸವಿ ನವೆಂಬರ್ 15 ನೇ ತಾರೀಖಿನ ದಿನ ಬರುತ್ತಾರೆ. ಅಂದಿನಿಂದ ಅವರು 19 ನೇ ತಾರೀಖಿನವರೆಗೂ ಬೆಂಗಳೂರಿನಲ್ಲಿ ಕಾರ್ಲ್ ವಾಲಿನ್‌ಬ್ಯಾರಕ್ಕಿನಲ್ಲಿಯೂ, 20 ರಿಂದ 23 ನೇ ತಾರೀಖಿನ ವರೆಗೆ ಮೈಸೂರಿನಲ್ಲಿ ಡೆಪುಟಿ ಕಮಿಷನರವರ ಆಫೀಸಿನಲ್ಲಿಯೂ ಇರುತ್ತಾರೆ. ವಿಮಾನದಳವನ್ನು ಸೇರಲಿಚ್ಛಿಸುವವರು ಮೇಲ್ಕಂಡ ದಿನಗಳಲ್ಲಿ ಈ ಎರಡು ಕೇಂದ್ರಗಳಲ್ಲಿ ಈ ಅಧಿಕಾರಿಗಳನ್ನು ಸಂದರ್ಶಿಸಬಹುದಾಗಿದೆ. ಬೇರೆ ಊರುಗಳಿಂದ ಈ ಎರಡು ಕೇಂದ್ರಗಳಿಗೆ ಬರುವವರಿಗೆ ಮೂರನೆಯ ತರಗತಿಯ (ಪ್ಯಾಸೆಂಜರ್) ರೈಲ್ವೆ ಭತ್ಯವನ್ನೂ ದಿನವೊಂದಕ್ಕೆ ನಾಲ್ವತ್ತಣೆಯಂತೆ ದಿನ ಭತ್ಯವನ್ನೂ ಕೊಡಲಾಗುವುದು. ಅವರು ಸ್ವೀಷ್ಟ ಮಾಸ್ಟರವರಿಂದ ಪಡೆದ ರೈಲ್ವೆ ರಸೀದಿಯನ್ನು ಹಾಜರು ಮಾಡಬೇಕು. ಬಸ್ಸುಗಳ ಮೂಲಕ ಬರುವವರು ಬಸ್ಸು ರಸೀದಿಗಳನ್ನು ಹಾಜರು ಮಾಡಿದ್ದಲ್ಲಿ ಅವರಿಗೆ ಹೋಗಿ ಒರುವ ಬಸ್ ಪ್ರಯಾಣದ ದರವನ್ನು ಕೊಡಲಾಗುವುದು.

ಮೆಕಾನಿಕ್ಸ್, ವೈರ್‌ಲೆಸ್ ಆಪರೇಟರ್‌ಗಳು ಗುಮಾಸ್ತರುಗಳು, ಫೋಟೋಗ್ರಾಫರುಗಳು, ನರ್ಸಿಂಗ್ ಆರ್ಡರ್ಲಿಗಳು, ಮೋಟಾರು ಟ್ರಾನ್ಸ್‌ಪೋರ್ಟ್ ಡ್ರೈವರುಗಳು, ಇವೆ ಮೊದಲಾದ ಕೆಲಸಗಳಿಗಾಗಿ ಉಮೇದುವಾರರನ್ನು ಚುನಾಯಿಸಲಾಗುವುದು. ಮೋಟಾರು ಟ್ರಾನ್ಸ್‌ಪೋರ್ಟ್ ಡ್ರೈವರುಗಳು ಕೆಲಸಕ್ಕೆ ಸೇರಲು ಇಷ್ಟಪಡುವವರನ್ನು ಬಿಟ್ಟು ಇತರ ಕೆಲಸಗಳಿಗೆ ಸೇರಲು ಇಷ್ಟಪಡುವವರು ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನೋ ಅಥವಾ ಅದಕ್ಕೆ ಸಮನಿಯಾದ ಬೇರೆ ಯಾವುದಾದರೂ ಪರೀಕ್ಷೆಯನ್ನೋ ಪಾಸು ಮಾಡಿರಬೇಕು. ಮತ್ತು ಅವರ ವಯಸ್ಸು 18 ರಿಂದ 32 ರನಳಿಗಿರಬೇಕು.

(ಪಿ. ಟಿ.)

SELECTIONS For C.C. Comp. 70
(Closing Date 24-11-41)

1. Neat. 2. Rarer. 3. Heeds. 4. Even. 5. Cold. 6. Boss. 7 Explsitod. 8. Pert. 9. Bother. 10. Patroe. 11. Inspiring. 12. Poobe. 13. Vicions. 14. Sordid. 15. Diec. 16. Greed. 17. Sot.

ಮೈಸೂರಿನಲ್ಲಿ ಗೀತಾಸಪ್ತಾಹ

29-11-1941 ನೇ ಶನಿವಾರದ ಲಾಗಾಯ್ತು 7-12-1941 ನೇ ಭಾನುವಾರದ ವರೆಗೆ ' ಗೀತಾಜಯಂತಿ " ಯು ದೊಡ್ಡಪೇಟೆಯಲ್ಲಿರುವ ಸಾಹುಕಾರ್ ಜಗ್ಗೂಲಾಲ್ ರವರ ಧರ್ಮಶಾಲೆಯಲ್ಲಿ ನಡೆಯುವದು. ಈ ಸಂಧರ್ಭದಲ್ಲಿ ಅನೇಕ ಮಹನೀಯರುಗಳಿಂದ ಉದಾನ್ಯಾಸಗಳೂ ಹರಿಕಥೆಗಳೂ ನಡೆಯುವವು.

ಶ್ರೀ ತ್ಯಾಗರಾಜರ ಆರಾಧನೆ ಮಹೋತ್ಸವ

ಮೈಸೂರು ಶ್ರೀ ತ್ಯಾಗರಾಜ ಸಂಗೀತ ವಿದ್ವತ್ಸಭೆಯ ಆಶ್ರಯದಲ್ಲಿ 23-11-1941ನೇ ಭಾನುವಾರ ಸಾಯಂಕಾಲ ೪ ಘಂಟೆಗೆ ಸರಿಯಾಗಿ ಮೈಸೂರು ಟೌನ್‌ಹಾಲಿನಲ್ಲಿ ಅನೇಕ ಸಂಗೀತ ವಿದ್ವಾಂಸರುಗಳಿಂದ ಸಂಗೀತವು ನಡೆಯುವುದು. ಇದರಲ್ಲಿ ಮುಖ್ಯವಾಗಿ ಆಸ್ಥಾನ ವಿದ್ವಾನ್ ವೈಣಿಕ ವಿ. ವೆಂಕಟಗಿರಿಯಪ್ಪನವರು ಆಸ್ಥಾನ ವಿದ್ವಾನ್ ತಿಟ್ಟೆಕೃಷ್ಣಯ್ಯಂಗಾರ್ ವರ್ಗ ಶ್ರೀಮತಿ ಸೀಲಮ್ಮ ಕಾಡಾಂಬಿಯವರು, ಕುಮಾರಿ ಜೊಕ್ಕಮ್ಮನವರು, ಶ್ರೀ ಎಸ್. ಕೆ. ರಾಮಾಚಾರ್‌ರವರು, ಶ್ರೀ ಎಂ. ವಿ. ದೊರಸ್ವಾಮಯ್ಯಂಗಾರ್ರು ಇವರುಗಳು ಸಂಗೀತವು ನಡೆಯುವುದು.

ಮೈಸೂರು ಪೌರಸಭೆ

ಕಳೆದ ಪೌರಸಭಾ ಮೀಟಿಂಗಿನಲ್ಲಿ ಸ್ವಶ್ನೋತ್ತರಗಳಿಂದ—(1) ಕಕ್ಕಸ್ಸುಗಳೇ ಇಲ್ಲದೇ 120 ಸಂದರ್ಭಗಳಲ್ಲಿ ಸ್ಯಾನಿಟರೀ ಸೆಸ್ ಹಾಕಿರುವ ವಿಷಯವೂ (2) ನಲ್ಲಿಯೇ ಇಲ್ಲದೇ 18 ಸಂದರ್ಭಗಳಲ್ಲಿ ನೀರಿನ ತೆರಿಗೆ ಹಾಕಿರುವ ವಿಷಯವೂ ಹೊರಪಟ್ಟಿದೆ. ಇದಕ್ಕೆ ಕಾರಣರಾದ ನೌಕರರು ಯಾರೆಂಬ ವಿಷಯದಲ್ಲಿ ವಿವರಗಳು ಸುಲಭವಾಗಿ ದೊರೆಯುವುದಿಲ್ಲವೆಂದು ಉತ್ತರ ಬಂದಿದೆ.

ತಿಂಗಳಿಗೆ ಚಂದಾ 0-1-3

ಮೈಸೂರು ನಗರದಲ್ಲಿ ಎಲ್ಲರಿಗೂ ಅನುಕೂಲವಾಗುವಂತೆ, ತಿಂಗಳುಗಟ್ಟಲೆ ಚಂದಾ ಮೇಲೆ " ಸತ್ಯವಾದಿ " ಯನ್ನು ಸರಬರಾಜು ಮಾಡಲು ಏರ್ಪಡಿಸಿದೆ. ತಿಂಗಳಿಗೆ 0-1-3 ಪತ್ರಿಕೆಯು ವಾರವಾರವೂ ನಿಮ್ಮ ಸ್ಥಳಗಳಿಗೆ ಕಳುಹಿಸಲಾಗುವುದು. ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿ.

ತಿಂಗಳುಗಟ್ಟಲೆ ಚಂದಾದಾರರನ್ನು ಸೇರಿಸಲೂ ಅವರಿಗೆ ಪತ್ರಿಕೆಗಳನ್ನು ಸಲ್ಲಿಸಲೂ ಸಂಬಳದ ಮೇಲಾಗಲೀ ಕಮಿಷನ್ ಮೇಲಾಗಲೀ ಏಜೆಂಟರು ಬೇಕಾಗಿದ್ದಾರೆ.

ಹೆಚ್ಚು ವಿಷಯಗಳನ್ನು, ಚಾಮರಾಜ ಪುರದಲ್ಲಿರುವ ನಮ್ಮ ಆಫೀಸಿನಲ್ಲಾಗಲೀ,

ಅ ಥ ವಾ

ಜಗನ್ಮೋಹನ್ ಪ್ಯಾಲೇಸ್ ರೋಡಿನಲ್ಲಿರುವ ಸತ್ಯಾಸ್ಟೋರ್ಸಿನಲ್ಲಾಗಲೀ ತಿಳಿಯಬಹುದು.

ಪತ್ತೇದಾರಿ ಕಾದಂಬರಿ—ಲೇಖಕರು—ಗುಂಡ್ಮಿ ಸದಾಶಿವಭಟ್ಟರು

"ಅದ್ಭುತ ಸಾಹಸ"

(ಈ ಗ್ರಂಥದ ಸಕಲ ಹಕ್ಕುಗಳು ಸತ್ಯವಾದಿ ಆಫೀಸಿಗೆ ಸೇರಿದೆ)

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದುದು)

ಸ್ಕಾಲಿಯು ಹೋಟಲಿಗೆ ಹಿಂದಿರುಗಿ, ಮಿ ||ಬ್ಲೇಕನು ಈ ವ್ಯವಹಾರದ ಎಲ್ಲಾ ರಹಸ್ಯಗಳನ್ನೂ ಈ ಸಾರಿ ಸ್ಕಾಲಿಯ ಎದುರಿಗೆ ಬಿಚ್ಚಿಟ್ಟನು. ಬೇಕನು ಸ್ಪಷ್ಟವಾಗಿ ಆತನಿಗೆ ಮಾಂಟಿಕಾರ್ಲೋದ ಯೂನಿವರ್ಸ್ ಹೋಟಲಿನ ಈ ಚಮತ್ಕಾರ ಪೂರ್ಣವಾದ ಕಳವಿನ ಎಲ್ಲಾ ವಿವರವನ್ನೂ ತಿಳಿಸಿದನು. ಅಲ್ಲದೆ ಯಾವ ಕಾರಣವಿಂದ ತನ್ನ ಸಂದೇಹವು ಹಕ್ಸ್ಲೆ ರೇಮರಿನ ಮೇಲೆ ಬಿದ್ದಿರುವುದೋ ಆ ಕಾರಣಗಳನ್ನೂ ವಿವರವಾಗಿ ತಿಳಿಸಿದನು.

ಸ್ಕಾಲಿಯು ಪೂರ್ತಿಯಾಗಿ ಎಲ್ಲಾ ಮಾತುಗಳನ್ನೂ ಕೇಳುತ್ತಿದ್ದು ತರುವಾಯ ಬ್ಲೇಕನನ್ನು ಕುರಿತು "ಸರಿ, ನೀವು ಕಾರ್ಡೋನನ ಬಳಿಗೆ ಹೋದ ಕಾರಣವನ್ನು ಈಗ ನಾನು ತಿಳಿದೆನು, ಮಿ ||ಬ್ಲೇಕ್! ಈ ಹಕ್ಸ್ಲೆ ರೇಮರ ನನ್ನು ನಾನು ಚಿಲ್ಲಾಪಿಲ್ಲಿ ಒಲ್ಲೆನು. ನಾನು ಆತನ ಹೆಸರನ್ನು ಸೋಹೊನಲ್ಲಿ ದ್ದಾಗ ಕೇಳಿದ್ದೆನು. ಆಮೇಲೆ ಅವನು ಒಂದೆರಡು ಸಾರಿ ನನ್ನಲ್ಲಿಯೂ ಬಂದಿದ್ದನು. ಆಗ ಆತನ ಸಂಗಡ ಜಲುಜೆಯೂದ ಒಬ್ಬ ತರುಣಿಯಿದ್ದಳು" ಎಂದು ಹೇಳಿದನು.

ಬ್ಲೇಕ್— ಹೌದು. ಅವಳು ಆತನ ಪ್ರಾಣದಾರಳು ಈಗಲೂ ಆಕೆಯು ಅವನ ಜೊತೆಯಲ್ಲಿಯೇ ಇರುವಳು. ಕಾರ್ಡೋನನ ವಾಸಸ್ಥಾನಕ್ಕೆ ಹೋಗಿ ನೋಡುವುದು ಅತಿ ಉಚಿತವಾದುದೆಂದು ನನ್ನ ಮನಸ್ಸಿಗೆ ಕಂಡಿತು. ಯಾಕೆಂದರೆ ಕಸರಕನು ಖಂಡಿತವಾಗಿ ಈ ವ್ಯವಹಾರದಲ್ಲಿ ಸೇರಿದ್ದಾನೆಂಬುದರಲ್ಲಿ ಸ್ವಲ್ಪವೂ ಸಂದೇಹವಿರಲಿಲ್ಲ. ಕಸರಕನು ಯಾವ ಕಡೆಯಲ್ಲಿರುವನೋ, ಅಲ್ಲಿಯೇ ಅಕ್ಕಪಕ್ಕದಲ್ಲಿ ರೇಮರನೂ ಕೂಡ ಅಗತ್ಯವಾಗಿ ಇರುವನು. ರೇಮರನು ಈಗ ಯಾವ ಸ್ಥಳದಲ್ಲಿ ಅವಿತುಕೊಂಡಿರುವನೋ ಆ ಸ್ಥಳವನ್ನು ನಾನು ಪತ್ತೇ ಹಚ್ಚಿರುವೆನೆಂದು ನನ್ನ ಅಭಿಪ್ರಾಯವಿದೆ. ಆದರೆ ಆ ಸ್ಥಳಕ್ಕೆ ಒಂದು ಸ್ಥಲ ಹೋಗಿ ನನಗೆ ತಕ್ಕಷ್ಟು ಅನುಭವವಾಗಿದೆ. ಆ ಅನುಭವದಮೇಲಿಂದ ಆಲೋಚಿಸುವುದಾದರೆ, ಹಲಕಲವು ಬಲಿಷ್ಠರೂ ಧೈರ್ಯಶಾಲಿಗಳೂ ಆದವರನ್ನು ಕರೆದು ಕೊಳ್ಳದೆ ಮತ್ತೊಮ್ಮೆ ಆ ಸ್ಥಳಕ್ಕೆ ಹೋಗುವುದೆಂಬುವುದು ಪ್ರಾಣವನ್ನು ಸಂಕಟಕ್ಕೆ ಗುರಿಮಾಡುವ ಕಾರ್ಯವೇ ಸರಿ."

ಸ್ಕಾಲಿ— ಹಾಗಾದರೆ ಇದೇನು ದೊಡ್ಡ ಸಂಗತಿ? ಎಷ್ಟು ಜನರನು ಕೇಳುವಿರೋ, ಅಷ್ಟು ಜನರನ್ನು ನಾನು ಏರ್ಪಡಿಸಿಕೊಡಬಲ್ಲೆನು. ಜೆನೋವಾದ ದೊಡ್ಡದೊಡ್ಡದಾದ ಬದ್ಮಾಷರೂ ಪೋಲಿಗಳೂ ಯಾವ ಸ್ಥಳದಲ್ಲಿ ಸಿಗಬಲ್ಲರೆಂಬುದನ್ನು ನಾನು ಚೆನ್ನಾಗಿ ತಿಳಿದಿರುವೆನು. ಎಲ್ಲಾ ಬಗೆಯಿಂದಲೂ ನಿಮ್ಮ ಆಜ್ಞೆಯನ್ನು ಸರಿಪಡಿಸಲು ಸಿದ್ಧಂಗಾಗಿಯೂ, ಸಮಯವೊದಗಿದಾಗ ತನ್ನ ಪ್ರಾಣವನ್ನು ಕೂಡ ಕೊಡಲೂ ಹಿಮ್ಮೆಟ್ಟದಂತಹ ಜುರುಕು ಮನುಷ್ಯರನ್ನು ನಿಮಗೆ ನಾನು ಒದಗಿಸಿಕೊಡಬಲ್ಲೆನು.

ಬ್ಲೇಕ್— ನೀನು ಹೇಳುವುದು ಸರಿ, ಸ್ಕಾಲೀ! ಆದರೆ ನಾನು ನಿನ್ನನ್ನು ಈ ತಂಟೆಯಲ್ಲಿ ಸಿಲುಕಿಸಲಪೇಕ್ಷಿಸುವುದಿಲ್ಲ. ನೀನು ಜಿನೋವಾದಲ್ಲಿಯೇ ಹೋಟಲಿಟ್ಟುಕೊಂಡು ವಾಸಿಸಿರಬೇಕಾಗಿದೆ. ಇಲ್ಲಿಯೇ ನಿನ್ನ ಸಂಪಾದನೆಯು ನಡೆಯಬೇಕಾಗಿದೆ. ಆದುದರಿಂದ, ಈ ವ್ಯವಹಾರದಲ್ಲಿ ನಿನ್ನ ಕೈ ಇದೆ ಅಥವಾ ನೀನು ತನಗೆ ಸಂಬಂಧಿಸಿದವರಿಗೆ ಮೋಸಮಾಡಲಿಚ್ಛಿಸುತ್ತೀ ಎಂಬುದರ ಅನುಮಾನವೂ ಕೂಡ ಏನ್ರೀಕಾರ್ಡೋನನಿಗೆ ಬಂದರೆ ಅವನು ನಿಶ್ಚಯವಾಗಿ ನಿನ್ನನ್ನು ತಳಕೆಳಗೆಮಾಡಬೆ ಬಿಡಲಾರನು. ಅದಲ್ಲದೆ ಇಷ್ಟರಲ್ಲಿಯೇ ರೇಮರನು ಆ ಸ್ಥಾನವನ್ನು ತ್ಯಜಿಸಿರಬಹುದೆಂದೂ ನನ್ನ ಅಂತರಂಗವು ಹೇಳುತ್ತಿದೆ.

ಸ್ಕಾಲಿ— ಹಾಗಾದರೆ ನೀವು ಮತ್ತೇನು ನಿಶ್ಚೈಸಿರುವಿರಿ?

[ಮುಂದುವರಿಯುವುದು

ವರ್ತಮಾನಗಳು

ಕಾಂಗ್ರೆಸ್ ಅಧಿಕಾರ ಸ್ವೀಕರಿಸಬೇಕೆಂಬುವ ಬಗ್ಗೆ ದೇಶದಲ್ಲೆಲ್ಲಾ ಪ್ರಚಾರಮಾಡಲು ಅನುಮತಿಕೊಡಬೇಕೆಂದು ಶ್ರೀ ಸತ್ಯಮೂರ್ತಿಯವರು ಗಾಂಧೀಜಿಗೆ ಬರೆದ ಮೇಲೆ ಗಾಂಧೀಜಿಯವರು ಅವರಿಗೆ ಅನುಮತಿಕೊಟ್ಟಿದ್ದಾರೆ.

ಜರ್ಮನಿಯಲ್ಲಿರುವ ಕೆಲಸಕ್ಕೆ ಬಾರದ ಮುದುಕರನ್ನೂ ಕುಂಟು ಕುರುಡಕನ್ನೂ ಸಾರ್ವತ್ರಿಕವಾಗಿ ನಾಶಮಾಡುವ ಕೆಲಸವನ್ನು ಜರ್ಮನಿಯು ಗೆಸ್ಟೆಪೋ ದಳವು ನಡೆಸುತ್ತಿದೆಯಂತೆ! ದೇಶದ ಆಭಿವೃದ್ಧಿಯನ್ನು ಸಾಧಿಸಬಲ್ಲ ಹಾಗೂ ಇಂದಿನ ಯುದ್ಧಕ್ಕೆ ಕಾರ್ಯಶಃ ಸಹಾಯಮಾಡಬಲ್ಲವರೇ ಒದುಕಿರಬೇಕೆಂದೂ ಉಳಿದವರು ಅಂದು ಕುರುಡರು ಕುಂಟರು ಬದುಕಿದ್ದು ಆಹಾರಸಾಮಗ್ರಿಗಳನ್ನು ತಿಂದರೆ ಖರ್ಚುಮಾಡುವದರಿಂದ ದೇಶಕ್ಕೆ ಅಹಿತ ಬಗೆದಂತಾಗುವದೆಂದೂ ಅವರ ಅಭಿಪ್ರಾಯವಂತೆ!

ಕಳೆದ ತಾ ||11 ರಲ್ಲಿ ಅಮೇರಿಕಾ ಪ್ರೆಸಿಡೆಂಟರಾದ ರೂಸ್‌ವೆಲ್ಟರು ಭಾಷಣಮಾಡುತ್ತಾ ಹೀಗೆಂದು ಹೇಳಿದರು— ಇಂದು ಮಿತ್ರ ರಾಷ್ಟ್ರಗಳು ಮಾಡುತ್ತಿರುವ ಯುದ್ಧವು ಜನತೆಯ ಸ್ವಾತಂತ್ರ್ಯ ಹಾಗೂ ವ್ಯಕ್ತಿತ್ವಕ್ಕಾಗಿ ಆಗಿದೆ. ಜನತೆಯಲ್ಲಿ ಪ್ರಾಶಯೀ ಅತ್ಯಾಚಾರವನ್ನು ಕೈಕೊಂಡು ಜನಾಂಗಗಳನ್ನು ಗುಲಾಮುಗಿರಿಗೆ ಈಡುಮಾಡುತ್ತಿರುವ ನಾಜೀ ತತ್ವವನ್ನು ನಾಶಪಡಿಸಲೇಬೇಕು. ಯಾವ ಸಂದರ್ಭದಲ್ಲಾದರೂ ಬಲಾತ್ಕಾರವಾಗಿ ಯುದ್ಧವು ನಮ್ಮ ಮೇಲೆ ಹೇರಲ್ಪಡಬಹುದು. ಆಗ ಅದನ್ನು ಎದುರಿಸಲು ನಾವು ಸಿದ್ಧರಾಗಿರಬೇಕು."

ಕಳೆದ 12 ನೇ ತಾರೀಖಿನ ರಾತ್ರಿ ಬೊಂಬಾಯಿನಲ್ಲಿ ಫ್ಯೂಮಾನಿಕ ದಾಳಿಯ ಪ್ರಯೋಗವು ಮೊದಲನೇ ಸಲ ನಡೆಸಲಾಯಿತು.

ರಷ್ಯನ್ನರಿಗೆ ಸಹಾನುಭೂತಿಯನ್ನು ತೋರಲು ಕಲ್ಕತ್ತಾದಲ್ಲಿ ಕಳೆದ ವಾರ ಸಭೆ ನಡೆಯಿತು. ಸಭೆಯಲ್ಲಿ ರಷ್ಯನ್ನರ ಶೌರ್ಯ ಧೈರ್ಯ ಸಾಹಸ ಮತ್ತು ರಾಷ್ಟ್ರಪ್ರೇಮಗಳನ್ನು ಅಭಿನುದಿಸಿ ಜರ್ಮನರ ರಾಕ್ಷಸೀ ಅಕ್ರಮಣದ ಧಿಕ್ಕಾರಮಾಡಲಾಯಿತು.

ಕೊಲ್ಲಾಪುರದಲ್ಲಿ ಮರಣದಂಡನೆ ಮತ್ತು ಬೇರೆ ಕಠಿಣಶಿಕ್ಷೆಗೆ ಒಳಗಾದ 71 ಜನ ಅಪರಾಧಿಗಳು ಉಪವಾಸವನ್ನು ಆಚರಿಸುತ್ತಿರುವರು. ಇವರ ನ್ಯಾಯವಾದ ಬೇಡಿಕೆಗಳನ್ನು ನೆರವೇರಿಸಲು ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ

ನಾಗಪುರದ ಭಟ್ಕಿಸಗಡ ಕಾಲೇಜಿನ ಮೂರನೇ ವರ್ಷದ ವಿದ್ಯಾರ್ಥಿಯಾದ ಡಿ. ಎಲ್, ಚೌಬೆ ಎನ್ನುವನು ಸಾಯುವವರೆಗೆ ಉಪವಾಸವನ್ನು ಕೈಕೊರತಿದ್ದಾನೆ. ಇದಕ್ಕೆ ಪ್ರಿನ್ಸಿಪಾಲರ ಅಭಿವಚನದಿಂದಾಗಿ ಕೊನೆಗಾಣಿಕ್ಕಿತ್ತು. ಆದರೆ ಮತ್ತೆ ಅವರಲ್ಲಿ ವಾತಭೇದವಾಗಿ ಅನ್ನ ಸತ್ಯಾಗ್ರಹಕ್ಕಾರಂಭವಾಗಿದೆ. ಈಗ ಪ್ರಿನ್ಸಿಪಾಲರು ಆ ಬಹಿಷ್ಕಾರವನ್ನು ಹಿಂದೆಗೆದುಕೊಂಡರೂ ಚೌಬೆ ಈತನು ಅನ್ನಸತ್ಯಾಗ್ರಹಕ್ಕಾರಂಭಿಸಿದ್ದಾನೆ. ಇದಕ್ಕೆ ಪ್ರಿನ್ಸಿಪಾಲರ ಶಬ್ದಗಳು ಒರಿಯ ಆರು ಮಂದಿ ವಿದ್ಯಾರ್ಥಿಗಳ ಮೇಲಿನ ಬಹಿಷ್ಕಾರವನ್ನು ಹಿಂಪೆಗೆದುಕೊಳ್ಳುವಂತಹ ವಿದ್ಯಾವೆಂದೂ ತನ್ನ ಮೇಲಿನ ಬಹಿಷ್ಕಾರವು ಹಾಗೆಯೇ ಒಳಿಯುತೆಂದೂ ಚೌಬೆಯು ಹೇಳುತ್ತಾನೆ.

— ——

ಮೈಸೂರು ಡಿಸ್ಟ್ರಿಕ್ಟು ಬೋರ್ಡು ಮೀಟಿಂಗು

ಮೈಸೂರು ಡಿಸ್ಟ್ರಿಕ್ಟ ಬೋರ್ಡ ಮೀಟಿಂಗನ್ನು ಇಳಿಗೆ ಇಸವಿ ಡಿಸೆಂಬರು ಮಾಹೆ ೮ನೇ ತಾರೀಖು ಸೋಮವಾರದ ದಿವಸ ಮಧ್ಯಾಹ್ನ ೧೨ ಘಂಟೆಗೆ ಮೈಸೂರು ಡಿಸ್ಟ್ರಿಕ್ಟು ಬೋರ್ಡು ಆಫೀಸು ಕಟ್ಟಡದಲ್ಲಿ ನಡೆಯಿಸಲು ಏರ್ಪಾಡು ಮಾಡಿರುತ್ತೆಂದು ತಿಳಿಯು ಬಂದಿದೆ.

ಈ ವಾರದ ಭವಿಷ್ಯ

ಲೇಖಕರು:— ಬಿ. ಎಲ್ ಆಚಾರ್
ಅಸ್ಸಾಸ್ಟೆಂಟ್ ಕಮಿಷನರ್, ಮೈಸೂರು.

ಮೇಷ

ಈ ವಾರದಲ್ಲಿ ನಿಮ್ಮ ಶರೀರ ಪ್ರಕೃತಿಯು ಚೆನ್ನಾಗಿ ಇಳಿಯಲಾರದು. ವಿಚಾರಾಧಿಕ್ಯದಿಂದ ನಿದ್ರೆ ಬರಲಾರದು. ಆಹಾರ ವಿಹಾರಗಳಲ್ಲಿ ಸಮಾಧಾನವಿರಲಾರದು. ಸಣ್ಣ ಸಣ್ಣ ಕೆಲಸಗಳಿಗೆ ಕೂಡ ಎಷ್ಟು ಪ್ರಯತ್ನಿಸಿದರೂ ನಿಷ್ಫಲವಾಗುವ್ರವು. ತಾ॥ 23, 24 ದ್ರವ್ಯ ನಷ್ಟ.

ವೃಷಭ

ಈ ವಾರದಲ್ಲಿ ನಿಮ್ಮ ಆರೋಗ್ಯವು ಚೆನ್ನಾಗಿ ಉಳಿಯುವ್ರದು. ಕೈಕೊಂಡ ಕಾರ್ಯಗಳು ವಿಘ್ನದಿಂದ ಕೊನೆಗಾಣುವ್ರವು. ಮಾನ ಸನ್ಮಾನ ದೊರೆಯುವದು. ಆಪ್ತ ಮತ್ತು ಪ್ರೀತಿ ಜನರ ಸಹವಾಸವು ಲಭಿಸುವ್ರದು. ತಾ ॥ 23 24 ಮಿತ್ರಸಹವಾಸ.

ಮಿಥುನ

ಈ ವಾರದಲ್ಲಿ ನಿಮ್ಮ ಪ್ರಕೃತಿಯು ಉಷ್ಣತೆಯಿಂದ ಕೂಡುವದು. ಮನೆಯಲ್ಲಿ ದುಃಖದ ವಾತಾವರಣವು ಉಪ್ಪನ್ನವಿಸಬಹುದು. ಮನ ಸ್ವಾಸ್ಥ್ಯವು ಚೆನ್ನಾಗಿ ಉಳಿಯಲಾರದು. ದುಡ್ಡಿನ ಅಡಚಣೆಯು ಜಾಸ್ತಿಯಾಗುವದು. ತಾ ॥ 20, 21 ಮಾನಹಾನಿ,

ಕರ್ಕಾಟಕ

ನಿಮ್ಮ ಉದ್ಯೋಗದಲ್ಲಿ ಇಷ್ಟು ದಿನಸಗಳವರೆಗಿದ್ದ ಕಷ್ಟಗಳು ಹೊರಟುಹೋಗಿ ಸುಸ್ಥಿತಿಯು ಬರುವ ಸಂಭವವಿದೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಸ್ಥಿತಿಯು ಉತ್ತಮವಾಗುವದು. ತಾ ॥ 23, 24 ಖರ್ಚು ಬಹಳವಾದರೂ ಚಿಂತೆಪಡಲಾರದು.

ಸಿಂಹ

ಈ ವಾರದಲ್ಲಿ ನಿಮ್ಮ ಪ್ರತಿಸ್ಪರ್ಧಿಗಳು ಮಿತ್ರರಾಗುವರು. ನೌಕರಿಸ್ಥಿತಿಯು ಸುಧಾರಿಸುವದು. ಆದರೆ ಖರ್ಚು ಮಾತ್ರ ಜಾಸ್ತಿಯಾಗಿರುವದು. ಆರ್ಥಿಕ ದೃಷ್ಟಿಯಿಂದ ನಿಮಗೆ ಅಡಚಣೆಯಾಗಲಾರದು. ತಾ ॥ 19, 20 ವಿಶೇಷ ಖರ್ಚು

ಕನ್ಯಾ

ಈ ವಾರದಲ್ಲಿ ನಿಮಗೆ ಸಂತಾಪವು ಬಹಳವಾಗುವದು. ಉದ್ಯೋಗದಲ್ಲಿ ಚಿಂತಾಜನಕ ವಾತಾವರಣವು ಉದ್ಭವಿಸುವದು. ಪತ್ನಿಯ ಪ್ರಕೃತಿಯು ಚೆನ್ನಾಗಿ ಇರಲಾರದು. ಆಪ್ತೇಷ್ಟರ ನಿಮ್ಮ ಸಲುವಾಗಿ ಕುಕಲ್ಪನೆ ಮಾಡುವರು. ತಾ ॥ 19, 20 ಪ್ರವಾಸ.

ತುಲಾ

ಪ್ರವಾಸಕ್ಕೆ ಈ ವಾರ ಒಳ್ಳೆಯದಲ್ಲ. ಆರೋಗ್ಯವು ಚೆನ್ನಾಗಿರಲಾರದು. ದುಡ್ಡು ಸಿಗಲಾರದು. ಶತ್ರುಗಳ ತೊಂದರೆ ಜಾಸ್ತಿಯಾಗಬಹುದು. ವಿದ್ಯಾರ್ಥಿಗಳಿಗೆ ಗ್ರಹಮಾನವು ಒಳ್ಳೆಯದಾಗಿಲ್ಲ. ತಾ ॥ 23, 24 ಖರ್ಚು.

ವೃಶ್ಚಿಕ

ನಿಮ್ಮ ಶರೀರ ಪ್ರಕೃತಿಯು ಚೆನ್ನಾಗಿರುವದಿಲ್ಲ. ಕೈಕೊಂಡ ಕಾರ್ಯಗಳು ನಿರ್ವಿಘ್ನದಿಂದ ನೆರವೇರುವವು. ಮಿತ್ರರೆ ಭೇಟಿಯಾಗುವದು. ವಿದ್ಯಾಭ್ಯಾಸಕ್ಕೆ ಈ ವಾರವು ಉತ್ಸಾಹಪ್ರದವಾಗಿದೆ. ತಾ 21, 22 ವಸ್ತುಗಳನ್ನು ಕೊಂಡುಕೊಳ್ಳಲು ಖರ್ಚು.

ಧನು

ನಿಮ್ಮ ಆರೋಗ್ಯವು ಸಾಧಾರಣವಾಗಿರುವದು. ಪತ್ನಿಯ ಪ್ರಕೃತಿಯು ಚೆನ್ನಾಗಿ ಉಳಿಯಲಾರದು, ಸರ್ಕಾರಿಕೆಲಸಗಳಲ್ಲಿನಿಮಗೆ ಅನುಕೂಲವಿಲ್ಲ, ದುಡ್ಡಿನ ಅಡಚಣೆಯ ಮೂಲಕ ಬಹಳ ಕೆಲಸಗಳು ಮುಂದಕ್ಕೆ ಹಾಕಲ್ಪಡುವವು. ತಾ ॥ 22, 23 ಕಷ್ಟಕಾರ್ಯ.

ಮಕರ

ನಿಮ್ಮ ಸಾಂಪತ್ತಿಕ ಸ್ಥಿತಿಯು ಚೆನ್ನಾಗಿ ಉಳಿಯುವದು. ಉದ್ಯೋಗದಲ್ಲಿ ಮುಂದೆ ಒರುವಿರಿ. ಪವಿತ್ರಸ್ಥಳಗಳನ್ನು ಸಂದರ್ಶಿಸುವ ಯೋಗವಿದೆ. ವಿದ್ಯಾಭ್ಯಾಸದಲ್ಲಿ ಯಶಸ್ಸು ದೊರೆಯುವ್ರದು. ತಾ ॥ 24, 25 ಮನೆಗೆ ಸಭ್ಯಗೃಹಸ್ಥರು ಬರುವರು.

ಕುಂಭ

ಈ ವಾರದಲ್ಲಿ ನಿಮಗೆ ಹೊಟ್ಟೇ ನೋವಿನಿಂದ ತೊಂದರೆಯಾಗಬಹುದು, ಮನೆಯಲ್ಲಿ ಖರ್ಚು ಹೆಚ್ಚುವದು. ಸರ್ಕಾರೀ ಕೆಲಸಗಳು ಮುಂದಕ್ಕೆ ಹಾಕಲ್ಪಟ್ಟರೂ ಅಪಯಶವಾಗಲಾರದು. ವಿದ್ಯಾಭ್ಯಾಸವು ಉತ್ತಮವಾಗಿರುವದು. ತಾ ॥ 22, 23 ಆಪ್ತೇಷ್ಟರ ಭೇಟಿ.

ಮೀನ

ನಿಮ್ಮ ಶರೀರ ಪ್ರಕೃತಿಯು ಸಮಾಧಾನಕರವಿರವದು. ಕೈಕೊಂಡ ಕಾರ್ಯಗಳು ಸರಿಯಾಗಿ ಪೂರೈಸುವವು, ಆಸ್ತಿವಾಸ್ತಿಗಳಿಂದ ಉಪಯೋಗವಾಗುವದು. ಆಪ್ತೇಷ್ಟರ ಭೇಟಿಯಾಗುವ ಸುಯೋಗವಿದೆ.

ವಿನೋದಲಹರಿ

ಒಬ್ಬ— 'ಏನು ಸ್ವಾಮಿ ! ನಿನ್ನೆ ಜಮಿೀಂದಾರರ ಮನೆಯಲ್ಲಿ ನಡೆದ ನಾಟ್ಯದ ಕಚೇರಿಗೆ ನೀವು ಒಂದಿರಲಿಲ್ಲಾ !

ಇನ್ನೊಬ್ಬ—ಎಲ್ಲಾ ಮನೆಯಲ್ಲಿಯೇ ನಡೆದುಹೋಯಿತು. ನನ್ನ ಹೆಂಡತಿ ನನಗಾಗಿ ಏರ್ಪಡಿಸಿದ್ದ ಔತಣವನ್ನು ಅಂಗೀಕರಿಸಿ ರಾತ್ರಿಯಲ್ಲಾ ನಾನೇ ನಾಟ್ಯವನ್ನು ಮಾಡಿದೆನು.

ಂ ಂ

ಹುಡುಗಿ— ಏನು ಸಾರ್ ! ನಿಮ್ಮ ಮಗಳ ಮಾವನ ಮನೆಯಲ್ಲಿ ಸುಖದಿಂದಿರುವಳೋ ?

ಮೇಷ್ಟ್ರು— ಉಂ, ಇದ್ದಾಳೆ. ನನ್ನ ಆಳಿಯನಿಗೆ ನನ್ನ ಮಗಳನ್ನು ಕಂಡರೆ ಸಿಂಹಸ್ವಪ್ನ.

ಂ ಂ

ಡಾಕ್ಟರು— ನಿಮ್ಮ ಯಜಮಾನರು ಜಟ್ಕಾ ಸೇದುವದನ್ನು ನಿಲ್ಲಿಸಿದ್ದು ಬಹಳ ಒಳ್ಳೇದಾಯಿತು. ಹಾಗೆ ನಿಲ್ಲಿಸಲು ಹೆಚ್ಚು ದೃಢಮನಸ್ಸಿರಬೇಕು.

ಯಜಮಾನಿ— ನೀವು ಹೇಳಿದ್ದು ಸರಿಯೇ. ನನಗೆ ದೃಢಮನಸ್ಸು ಇರುಪಕೆಯಿಂದಲೇ ಅತನು ಹಾಗೆ ಮಾಡಲು ಸಾಧ್ಯವಾದ್ದು.

ಂ ಂ

ಒಬ್ಬರ ಮನೆಯೊಳಕ್ಕೆ ಒಬ್ಬನು ಹೋಗಿ " ತಿಗಣೆಗಳಿಗೆ ಔಷಧಿ ಬೇಕೆ ' ಎಂದು ಕೇಳಿದನು.

ಮನೆಯ ಸ್ವಂತಗಾರನು ಕೋಪದಿಂದ " ಈ ಮನೆಯಲ್ಲಿ ತಿಗಣೆಗಳಿಲ್ಲ. ನಿನ್ನ ಔಷಧಿ ಬೇಡ " ಎಂದನು.

" ಒಳ್ಳೇದು, ಅದನ್ನು ನಿರ್ಧಾರಣೆ ಮಾಡಿಕೊಳ್ಳಲಿಕ್ಕಾಗಿಯೇ ಕೇಳಿದೆನು. ಹಾಗಿದ್ದಲ್ಲಿ ನಾನು ನಿಮ್ಮ ಮನೆಗೆ ಒಕ್ಕಲು ಒರಬಹುದು " ಎಂದು ಉತ್ತರಕೊಟ್ಟನು.

ಂ ಂ

ರಾಮನನ್ನು ಅತನ ತಂದೆ ಒಂದು ಔತಣಕ್ಕೆ ಕರೆದುಕೊಂಡು ಹೋದನು. ಅಲ್ಲಿ ವೈಸೂರುವಾಕು ತಿನ್ನಲಿಕ್ಕೆ ಮಗನನ್ನು ಬಹಳ ಒಲವಂತವಾಡಿದನು.

ಅಪ್ಪಾ ! ಹೊಟ್ಟೇ ತುಂಬಿದೆ. ಏನೂ ತಿನ್ನಲಾರೆ, ಎಂದು ಮಗನೆಂದನು.

ಹಾಗಾದರೆ ವಗೂ ! ಜೇಬಿನಲ್ಲಿ ಹಾಕಿಕೋ, ಸಾಯಂಕಾಲ ತಿನ್ನಬಹುದು, ಎಂದು ತಂದೆಯು ಹೇಳಿದನು.

ಅಪ್ಪಾ ! ಜೇಬು ಆಗಲೇ ತುಂಬಿ ಹೋಗಿದೆ, ಎಂದು ಮಗನು ಉತ್ತರಕೊಟ್ಟನು.

ಇದುವರೆಗೂ ನಡೆದಿರುವ ಹಲವು ಆಶ್ಚರ್ಯ ವಿಷಯಗಳು

ಕರ್ನೂಲು ಡಿಸ್ಟ್ರಿಕ್ಟ್ ಕುಂಭಂ ತಾಲ್ಲೂಕಿಗುಂಡುಮಂಡಲು ಸಮೀಪದಲ್ಲಿ ಶ್ರೀ ವೀರಾಂಜನೇಯಸ್ವಾಮಿಯವರ ದೇವಾಲಯವೊಂದುಂಟು. 1931 ನೇ ಜೂನ್ ತಿಂಗಳಲ್ಲಿ ಶ್ರೀ ರಾಮ ಸಪ್ತಾಹವನ್ನು ಮಾಡಿ ಮುಗಿಸಿದ ಬಂಧು ಗಂಟೆಯ ಮೇಲೆ, ಶ್ರೀ ಜನಮೇಜಯರಿಂದ ಪ್ರತಿಷ್ಠಿತವಾದ ಮೇಲ್ಕುಂಡ ತಿಲಾವಿಗ್ರಹವ ಶಿರೋಭಾಗವು ಅರ್ಧ ಗಂಟೆಯವರಿಗೂ ಚಲಿಸುತ್ತಿತ್ತು. ತನ್ನ ಸೇವೆಯು ಶ್ರೀ ಆಂಜನೇಯರನ್ನು ತೃಪ್ತಿಪಡಿಸಿತೆಂದು ಭಕ್ತರು ಸಂತುಷ್ಟರಾದರು.

ಡಿಂಡಿಗಲ್ಲಿಗೆ ಉತ್ತರದಲ್ಲಿ 6 ಮೈಲ್ಲು ದೂರದಲ್ಲಿರುವ ಶ್ರೀ ಮುತ್ತುಲಕ್ಷ್ಮಿ ದೇವತೆಗೆ 21-10-35 ರಲ್ಲಿ ಉತ್ಸವವು ನಡೆದಾಗ, ದೇವಾಲಯದ ಎದುರಿನಲ್ಲಿರುವ ಕಲ್ಲಿನ ಮಂಟಪವು ಸ್ವಲ್ಪ ಹೊತ್ತಿನವರೆಗೂ ಹಿಂದಕ್ಕೂ ಮುಂದಕ್ಕೂ ಚಲಿಸುವುದು ಕಾಣಬಂದಿತು.

25-2-35 ರಲ್ಲಿ ನಾರ್ವೆ ಆಸ್ಪತ್ರೆಯಲ್ಲಿ ಒಂದು ಮೇಜು ತನ್ನಷ್ಟಕ್ಕೆ ತಾನೇ ಕುಣಿಯಲಾರಂಭಿಸಿತು, ವೈದ್ಯರಿಗೆ ಕಾರಣ ನೇನೆಂಬುದು ಗೋಚರವಾಗಲಿಲ್ಲ. ದೀಪವನ್ನು ಹಚ್ಚಿದೊಡನೆಯೇ ಈ ದೃಶ್ಯವೂ ಅದೃಶ್ಯವಾಗುತ್ತಲಿದ್ದಿತು.

ಏಲೂರಿನ ಹತ್ತಿರ ಒಬ್ಬ ಮಹಮದೀಯ ಫಕೀರನ ಗೋರಿಯುಂಟು. 1935 ನೇ ನವೆಂಬರಿನಲ್ಲಿ ಆ ಗೋರಿಯನ್ನು ಆಗೆದು ಒಂದು ಹೊಸ ಕಟ್ಟೇರಿಸುವನ್ನು ನಿರ್ಮಾಣ ಮಾಡಲು ಯತ್ನಿಸಿದರು. ಆ ಗೋರಿಯ ಮೇಲೆ ಮೊದಲನೆಯ ಏಟು ಬೀಳುತ್ತಲೂ, ಅದರಿಂದ ರಕ್ತವು ಹೊರಟು ಆಗಿಯಲು ಯತ್ನಿಸಿದ ಮನುಷ್ಯನು ಕೂಡಲೇ ಮರಣಹೊಂದಿದನು.

1934 ರಲ್ಲಿ ಭೂತವು ಹಿಡಿದ ಮೊ ಆಂಟೀ ಎಂಬ ಯುವತಿಗೆ ಭೂತವೈದ್ಯವನ್ನು ಮಾಡುತ್ತಿದ್ದ ವೈದ್ಯನು ಬಹಳವಾಗಿ ಏಟು ಹೊಡೆಯುವಿಕೆಯಿಂದ ಆಕೆಯು ಮೃತಪಟ್ಟಳು. ಇದು ರಂಗೂನಿನ ವರ್ತಮಾನ.

ಬಂಗಾಳಾದಲ್ಲಿ ತಾನು ಎಂದೋ ಮಾಡಿದ ಹುಲಿಯು ರಾತ್ರಿಗಳಲ್ಲಿ ತನಗೆ ಕಾಣಬರುತ್ತಿರುವದಾಗಿ ಇಂಗ್ಲೆಂಡಿಗೆ ಹೋದ ನಂತರ ಕರ್ನಲ್‌ರೊಬ್ಬರು ತಿಳಿಸಿರುವರು. ಕ್ಲಬ್ಬಿಗೆ ಹೋಗುವಾಗಲೂ ಆ ಹುಲಿಯು ಹಿಂದಿನಿಂದ ಬರುತ್ತಿರುವಂತೆ ಭಾಸವಾಗುತ್ತಿತ್ತಂತೆ!

ಜೈನಾದಲ್ಲಿಯೂ ಒಂದು ಹೋಟಲಿನಲ್ಲಿ 1934 ರಲ್ಲಿ ಒಂದು ದೊಡ್ಡ ವಿಾಸನ್ನು ಕೊಯ್ದಾಗ ಆದರ ಹೊಟ್ಟೆಯಲ್ಲಿ ಒಂದು ಮಗುವು ಕಂಡು ಬಂದಿತು.

ಋಷ್ಯಶೃಂಗರಿರಿಗೆ ಕೊಂಬುಗಳಿದ್ದಂತೆಯೇ ವಿಲಾಸಪುರದಲ್ಲಿ ಒಬ್ಬನಿಗೆ ಪಶುಗಳ ಕೊಂಬುಗಳಂತೆ ಕೊಂಬುಗಳು ಹುಟ್ಟಿ ಬೆಳೆಯುತ್ತಿರಲು 1934 ರಲ್ಲಿ ಸರ್ಜರೊಬ್ಬರು ಅವನ್ನು ಕೊಯ್ದು ಹಾಕಿದರು.

1934 ರಲ್ಲಿ ಕಾಂಗ್ರಿ ಸಮೀಪದಲ್ಲಿ ೧೫ ಅಡಿ ಉದ್ದವಾದ ಸರ್ಪವೊಂದನ್ನು ಕೊಂದು ಪರೀಕ್ಷಿಸಲಾಗಿ, ಅದರ ಹೊಟ್ಟೆಯಲ್ಲಿ ಒಂದು ಜಿಂಕೆಯು ಕಂಡು ಬಂದಿತು.

ಲಂಡನ್ನಿನಲ್ಲಿ ಹೊಟ್ಟೇನೋವಿನಿಂದ ಬಾಧೆಪಡುತ್ತಿದ್ದ ಸ್ತ್ರೀಗೆ 1934 ರಲ್ಲಿ ಆಪರೇಷನ್ ಮಾಡಿದಾಗ ಹೊಟ್ಟೆಯಲ್ಲಿ ಒಂದು ಕತ್ತರಿಯು ಕಂಡುಬಂದಿತು.

ಲಂಡನ್ ಸಮೀಪದಲ್ಲಿಯ ಒಂದು ಹೋಲಲಿನಲ್ಲಿಯ ನೌಕರನನ್ನು ಯಾರು ಸ್ಪರ್ಶಿಸಿದರೂ ವಿದ್ಯುಚ್ಛಕ್ತಿಯು ಹುಟ್ಟುತ್ತಿತ್ತಂ.

ಕಾಶ್ಮೀರದಲ್ಲಿ 29 ವರ್ಷ ವಯಸ್ಸಿನವನಾಗಿದ್ದ 'ಕಂದಾಬಕ್ಸ್' ಎಂಬಾತನು ಕಣ್ಣುಗಳನ್ನು ಮುಚ್ಚಿಕೊಂಡು ಓದಬಲ್ಲ ಸಾಮರ್ಥ್ಯವುಳ್ಳವನಾಗಿದ್ದುದನ್ನು 1935 ರಲ್ಲಿ ಲಂಡನ್ನಿನ ವೈದ್ಯರು ನೋಡಿ ಆಶ್ಚರ್ಯಪಟ್ಟರು. ಇದು ದಿವ್ಯದೃಷ್ಟಿಯೋ ಏನೋ ಎಂದು ಕೆಲವರು ಅಭಿಪ್ರಾಯಪಟ್ಟರು.

1935 ರಲ್ಲಿ ಇಂಡೋರಿನಲ್ಲಿ ಒಂದು ಸಾಕಿದ ಕೋತಿಯು ತನ್ನ ಯಜಮಾನನ ಮೇಲೆ ಆಗ್ರಹಗೊಂಡು ಅತನನ್ನು ತುಪ್ಪಾಕಿಯಿಂದ ಸುಟ್ಟು ಹಾಕಿತು. ಕೋತಿಗಳು ಮನುಷ್ಯರ ಸೇವೆ ಮಾಡುತ್ತಾ ಯುದ್ಧದಲ್ಲಿ ಭಾಗವಹಿಸುವದು ಆಶ್ಚರ್ಯವಲ್ಲವೆಂಬುದು ಇದರಿಂದ ಸಿದ್ಧವಾಗುವದು.

ಪಾದಚಾರಿಗಳಾಗಿ ಭೂಪ್ರದಕ್ಷಿಣೆ ಮಾಡುವದು ಪುರಾಣಯುಗದವರ ಒಂದು ನಡವಳಿಕೆ. ಈಗಲೂ ಆ ರೀತಿಯಲ್ಲಿ ಪಾದಚಾರಿಗಳಾಗಿ ಭೂಮಿಯ ಸ್ವಲ್ಪ ಭಾಗವನ್ನಾದರೂ ಒಳಸಿ ಬರುವವರು ಇಲ್ಲಿ ಅಲ್ಲಿ ಕಾಣಬರುತ್ತಿದ್ದಾರೆ. 1934ನೆಯ ವರ್ಷದ ವೇಳೆಗೆ ಕೆಕಾಟೋ ಎಂಬ ಜಪಾನೀಯನು 40,000 ಮೈಲಿ ನಡೆದು ಪೂರ್ವಾರ್ಧಗೋಳದ ಹಲವು ಭಾಗಗಳನ್ನು ಸುತ್ತಿದನು.

ಪ್ರಾತ್ಯಂಧರಾದ ಗಣಿತಶಾಸ್ತ್ರ ನಿಪುಣರು ಮದರಾಸು ಪ್ರೊಸ್ಟುಟೋರು ಮೊದಲಾದ ಸ್ಥಳಗಳಲ್ಲಿದ್ದಾರೆ. ಅದ್ಭುತ ವೇಧಾಶಕ್ತಿಯುಳ್ಳವರು ಪ್ರಪಂಚದಲ್ಲಿ 4-5 ಮಂದಿ ಇರುವರೆಂದೂ ಪತ್ರಿಕೆಗಳ ಮೂಲಕ ತಿಳಿದು ಬಂದಿದೆ.

Vaidyaratnam P. S. Varier's

Arya Vaidya Sala Kottakkal

Branches — Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma Ceylon, Malaya and other colonies alone stands for its unequalled reliability. All sorts of ayurvedic preparations prepared under scientific methods are always kept here in stock for sale. Dhara, Navarakkizhi, Pizhichil and other special treatments of Malabar are conducted Vunder aidyaratnam's own supervision. Treatment through correspondance a speciality. Vaidya ratnam visits his Calicut branch on almost every 1st and 3rd Sundays and Palghat Branch on 2nd and 4th Sundays.

CHYAVANAPRAS

From the time of ancient sages this medicine is reknowned for its unequalled efficacy in retaining youthfulness. It is so termed because Sage Chyavan was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases. Direction — ½ to 2 tolas twice daily after food. Price per pound R 4.

For further particulars and free catologues please apply to—

The Manager, Arya Vaidyasala,
KOTTAKAL (S. Malabar)

For Victory in Trade Advertise in Satyavadi

ಸತ್ಯವಾದಿ ವಾರಪತ್ರಿಕೆಗೆ
ಚಂದಾದಾರರಾಗಿರಿ

Sri
Mahalakshmi Hall
Tailors
Outfitters
&
Breeches Specialists
Sayyaji Rao Road, Mysore

ಅಕ್ಕರ ಸಾಮಾಜಿಕ — ಭಾವಪರಿಪೂರ್ಣವಾದ ಕಥೆ ! ಓದಲು ಪ್ರಾರಂಭಿಸಿದರೆ ಕಥೆಪೂರ್ತಿಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. 7 ಆಣೆ ಸ್ಟ್ಯಾಂಪು ಕಳುಹಿಸಿದರೆ ಪುಸ್ತಕವನ್ನು ಕಳುಹಿಸುತ್ತೇವೆ.
ಸತ್ಯವಾದಿ ಆಫೀಸ್. ಮೈಸೂರು

When you desire to buy or sell Houses & Sites Govt. Loan Bonds Shares of Companies apply to
The Satyavadi Ltd., Mysore.

The Satyavadi Limited
(Incorporated in Mysore State)
MYSORE
A few shares of Rs. 5 are available

ಉಪಯುಕ್ತವಾದ ವರ್ತಮಾನ
ಮನೆ, ಗದ್ದೆ, ವಗೈರೆ ಮಾರತಕ್ಕವರೂ, ಕೊಳ್ಳತಕ್ಕವರೂ, ಭೋಗ್ಯ, ಆಧಾರ ಮಾಡತಕ್ಕವರೂ, ಭೋಗ್ಯ ಆಧಾರಕ್ಕೆ ಪಡೆಯತಕ್ಕವರೂ, ಮತ್ತು ಮನೆಗಳನ್ನು ಬಾಡಿಗೆಗೆ ಕೊಡತಕ್ಕವರೂ, ಬಾಡಿಗೆಗೆ ತೆಗೆದುಕೊಳ್ಳುವವರೂ ಸಾಲ ಕೊಡತಕ್ಕವರೂ, ಸಾಲ ತೆಗೆದುಕೊಳ್ಳುವವರೂ, ನಮ್ಮ ಏಜೆನ್ಸಿಗೆ ತಿಳಿಸಿದಲ್ಲಿ ಸೂಕ್ತವಾದ ಏರ್ಪಾಡು ಮಾಡಲಾಗುವದು
ಮ್ಯಾನೇಜರ್. ಸತ್ಯವಾದಿ ಆಫೀಸ್
ಚಾಮರಾಜಪುರಂ, ಮೈಸೂರು.

Satya Stores
Jagan Mohan Palace Road
MYSORE
For Sweets, Students' requisites
Soaps, hair oils, Biscuits

Discerning Comeptitors alway consult
The Oracle
Weekly (Regd)
for expert comments and exhaustive Forum, on I. W. C.
— Published Every Wednesday —
Subscription Rates
Annual Rs 4, Half-yearly Rs 2
Quarterly Re 1
Price per copy 2 annas
THE ORACLE
68 Commercial Street, Bangalore



ಪುರುಷರ ಬಲ ಯೌವನಗಳಿಗಾಗಿಯೂ, ಸ್ತ್ರೀಯರ ಸಂತಾನ ಸೌಂದರ್ಯಗಳಿಗಾಗಿಯೂ
ಅನಾದಿಯಿಂದಲೂ ಪ್ರಯತ್ನಿಸುತ್ತಿರುವುದುಂಟು. — — ಈ ಕೋರಿಕೆಗಳು ಸಫಲಿಸಲು ಇಂದೇ ನಮ್ಮ

ಅಮೃತ ಸಂಜೀವಿನಿ

— ಉಪಯೋಗಿಸಿರಿ —

ಧಾತು ಕ್ಷೀಣತೆ, ಧಾತು ನೀರಾಗುವಿಕೆ, ಉಷ್ಣವ್ಯಾಧಿಗಳಿಂದ ನರಳುವಿಕೆ, ಕೈಕಾಲುತೆಳೆತ, ಸ್ವಪ್ನಸ್ಖಲನ, ಸಂಭೋಗೇಚ್ಛೆ ಇಲ್ಲದಿರುವಿಕೆ, ಸಂಭೋಗ ಕಾರ್ಯದಲ್ಲಿ ನಿರ್ಬಲತೆ ಇಂದ್ರಿಯ ಸಂಬಂಧ ದೋಷಗಳು ಮೇಹಹಾಗೂ ಉಷ್ಣ ಸಂಬಂಧ ವ್ಯಾಧಿಗಳನ್ನು ಖಾತರಿಯಾಗಿ ಗುಣಮಾಡುವ ಅಮೃತ ಸದೃಶವಾದ ಸಂಜೀವಿನಿಯು ಇದು ದಿನಕ್ಕೆ ಎರಡುಬಾರಿ, ಸುಖೋಷ್ಣವಾದ ಹಾಲಿನೊಂದಿಗೆ ಸೇವಿಸತಕ್ಕದ್ದು. ಹೆಚ್ಚು ಪಥ್ಯವೇನೂ ಇಲ್ಲ. ಉಪ್ಪು, ಹುಳಿ ಕಾರಗಳನ್ನು ಎಷ್ಟಿಯಾಗಿ ಉಪಯೋಗಿಸುವದು ಒಳ್ಳೇದು ಮುದುಕರೂ, ನಿತ್ರಾಣವುಳ್ಳವರೂ, ಹೆಚ್ಚು ಮೆದಳಿನ ಕೆಲಸಮಾಡುವರೂ, ಈ ಔಷಧಿಯನ್ನು ಸೇವಿಸುವಕಾಲದಲ್ಲಿ ವಾರಕ್ಕೆ ಎರಡುಬಾರಿ ಅಭ್ಯಂಗನ ಸ್ನಾನವನ್ನು ಮಾಡುತ್ತಾ ಬಂದಲ್ಲಿ ಹೆಚ್ಚುಗುಣವು ಕಾಣಬರುವುದು. ಬೆಲೆ 1 ರೂಪಾಯಿ

ಶ್ರೀ ಧನ್ವಂತರಿ ವೈದ್ಯಶಾಲಾ — ಡಿಸ್ಪೆನ್ಸರಿ — ಕೂಪರ್‌ರಾಂಜಿ ಅಂಡ್ ಕಂಪೆನಿ
ಲಾನ್ಸ್‌ಡೌನ್ ಬಜಾರ್, ಮೈಸೂರು 157 ಕಬ್ಬನ್‌ಪೇಟೆ ಮೇನ್ ರೋಡ್ ಬೆಂಗಳೂರು ಸಿಟಿ.

Regd No M 1299 Founded 1917

SATYAVADI

Vaidyaratnam P. S. Varier's

Arya Vaidya Sala

Kottakkal

Branches – Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma Ceylon, Malaya and other colonies alone stands for its unequalled reliability. All sorts of ayurvedic preparations prepared under scientific methods are always kept here in stock for sale. Dhara, Navarakkizhi, Pizhichil and other special treatments of Malabar are conducted Vunder aidyaratnam's own supervision. Treatment through correspondance a speciality. Vaidyaratnam visits his Calicut branch on almost every 1 st and 3 rd Sundays and Palghat Branch on 2 nd and 4th Sundays.

CHYAVANAPRAS

From the time of ancient sages this medicine is reknowned for its unequalled efficacy in retaining youthful ness. It is so termed because Sage Chyavan was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases. Direction — ½ to 2 tolas twice daily after food. Price per pound R 4.

For further particulars and free catologues please apply to—

The Manager, Arya Vaidyasala,

KOTTAKAL (S. Malabar)

Edited, Printed & published by M.S. Krishna Rao, at the Satyavadi Press, Chamaraja Agrahar, Mysore

For Victory in Trade

ಸುಲಭ ಚಿಕಿತ್ಸೆ

ಗೇರಿನಿಂದ ಅದ ಹುಣ್ಣಿಗೆ— ಹುಣಸೆ ಹಣ್ಣಿನ ಗೊಜ್ಜು ಲೇಪಿಸುವುದ..

ಕರ್ಪೂರವನ್ನು ತಿಂದಲ್ಲಿ ಚಿಕಿತ್ಸೆ—ಪಾಯಿಲ ಸೊಪ್ಪಿನ ಪಲ್ಯವನ್ನು ತಿನ್ನುವುದು.

ಹೊಟ್ಟೇನೋವು (ಉಷ್ಣ ಸಂಬಂಧವಾದದ್ದು— ಕಲ್ಸಕ್ಕಿ, ಯಾಲಕ್ಕಿ, ಬೇರಿಗೆ, ಕಲ್ಲಾರು, ಇವುಗಳ ಪುಡಿಯನ್ನು ಕರೀಹತ್ತೀ ಏಲೆಯ ರಸದಲ್ಲಿ ಮಿಶ್ರಮಾಡಿ ಕುಡಿಯುವದು. ಆಕಳ ಮಜ್ಜಿಗೆ ಅನ್ನ ಪಥ್ಯ.

ವಾಯು ಸಂಬಂಧದಾದ ಹೊಟ್ಟೇ ನೋವಿಗೆ — (1) ಅರಶಿನ ಅಥವಾ ರಾಗೀ ಹಿಟ್ಟಿನೊಳಗೆ ಸ್ವಲ್ಪ ಹಿಂಗನ್ನಿಟ್ಟು ಸಣ್ಣ ಮಾತ್ರೆಯಾಂತೆ ಮಾಡಿ ಅದನ್ನು ಬೆಂಕಿಯಲ್ಲಿ ಸುಟ್ಟು ತಿನ್ನುವದು (2) ನೀರಿನೊಂದಿಗೆ ಉಪ್ಪನ್ನು ಬೆಂಸಿ ಕುದಿಸಿ ಕುಡಿಯವದು (3) ಜನಳುಪ್ಪು ನೀರಿನೊಂದಿಗೆ ಹಾಕಿ ಕುದಿಸಿ ಕುಡಿಯುವದು.

ಮಕ್ಕಳ ಬೇಧಿಗೆ— ಎಕ್ಕದ ಬೇರು ಅಥವಾ ಅರಳೆಯ ಚಿಗುರು ಇದಕ್ಕೆ ಸಾಂಬ್ರಾಣಿ ಹೊಗೆಯನ್ನು ಹಾಕಿ ಕೈಗೆ ರಕ್ಷೆಯಾಗಿ ಕಟ್ಟಿದಲ್ಲಿ ಬೇಧಿಯು ನಿಲ್ಲುವುದು.

ದೂರ ನಡೆದರೂ ಆಯಾಸವಾಗದಿರಲು ತಾಂತ್ರಿಕ ಯೋಗ— ಸೆಗ್ಗಲು ಬೀಜ ಅರ್ಧ ಗದ್ಯಾಣ, ನಸುಗುನ್ನಿಬೀಜ ಎರಡೂಕಾಲು ಸಮುದ್ರಶೋಕೆಯಬೀಜ 4. ಹಳೇ ಬೆಲ್ಲ ನಾಲ್ಕು ಭಾಗ. ಚೂರ್ಣಿಸಿ ಜೇನುತುಪ್ಪದಲ್ಲಿ ಕಲಿಸಿ ಗುಳಿಗೆಮಾಡಿ ಬಾಯಿಯಲ್ಲಿಟ್ಟುಕೊಂಡು ನಡೆಯುವದು.

ಹೊಟ್ಟೆಯಲ್ಲಿಯ ಜಂತುಹುಳು ಬಿದ್ದು ಹೋಗಲು— (1) ಮುತ್ತುಗದ ಬೀಜಗಳನ್ನು ಕೆಮ್ಮಣ್ಣಿನ ನೀರಿನಲ್ಲಿ ನೆನೆಯಿಟ್ಟು ಗಂಧವನ್ನು ತೆಯ್ದು ಸೇಕ್ಕಿಸುವದು (2] ಫರಂಗಿ ಗಿಡದ ಹಾಲನ್ನು ಬೆಲ್ಲದಲ್ಲಿ ಹೊಸಗಿ ನುಂಗಿಸುವುದು. (3) ಹಸುವಿದ ಗಂಜಳವನ್ನು ಕುಡಿಯುವುದು.

ವಾಯುಹರವಾಗಲು— ಒಣಕೊಬ್ಬರಿ, ಮೆಣಸು ಈ ಎರಡನ್ನೂ ದುಣ್ಣಿಗೆ ಅರೆದು, ಈ ಎರಡಕ್ಕೂ ಸಮ ಬೆಲ್ಲ ಹಾಕಿ ಉಂಡೆಗಳಾಗಿ ಮಾಡಿಟ್ಟುಕೊಂಡು ತಿನ್ನುತ್ತಾ ಬರುವುದು. (2) ಬೊಕ್ಕಣಿಸೊಪ್ಪಿನ ರಸ, ಸಮ ಭಾಗ ತುಪ್ಪ ಬೆರೆಸಿ, ಅದರೊಂದಿಗೆ ಹಿಪ್ಪಲಿ, ಲವಂಗ, ಮೆಣಸು ಇವುಗಳ ಪುಡಿಯನ್ನು ಬೆರೆಸಿ ಕುಡಿಯುವದು. ಹುರುಳಿಕಟ್ಟು ಅನ್ನ ಪಥ್ಯ. ಮೂರು ವಾರಗಳು ಉಪಯೋಗಿಸುವುದು.

(ಓ೯)

Selections for Commonsense Crossword No. 228 Next Week

ಸಿನಿಮಾ

[ಬರೆದವರು— ಕೆ. ಸುಬ್ಬಣ್ಣ

ಪ್ರಭಾತ ಪಿಕ್ಚರ್ಸ್‌ರವರ "ಪಾರ್ವತಿ ಕಲ್ಯಾಣ" ವು ಡಿಸೆಂಬರ್ 10 ನೇ ತಾರೀಖಿನಿಂದ ಪ್ರದರ್ಶಿಸಲ್ಪಡುವುದೆಂದೂ, ಇದರಲ್ಲಿ ಶ್ರೀ ಶಾಂತಕುಮಾರಿ, ಶೇಷಾಚಲಂ, ರಾಧಾಕೃಷ್ಣಯ್ಯ, ಕಮಲಾದೇವಿ ಮುಂತಾದವರು ಅಭಿನಯಿಸಿದ್ದಾರೆಂದೂ ತಿಳಿಯಬಂದಿದೆ.

ಕಲ್ಕತ್ತಾ ಗಜಪತಿ ಫಿಲ್ಮ್ಸ್‌ರವರ 'ನಾರದ ಸಂಸಾರ' ಚಿತ್ರವು ಇನ್ನು 10–15 ದಿವಸಗಳಲ್ಲಿ ಮುಗಿಸಲ್ಪಡುವುದೆಂದೂ ಮತ್ತು ಅದರಲ್ಲಿ ನಟಿಸಿರುವ ಮಿಸ್ ರಾಜ್ಯಂ ಕಲ್ಕತ್ತಾದಿಂದ ಹಿಂತಿರುಗಿ, ಸಾರಥಿಯವರ 'ಪತ್ನಿ' ಚಿತ್ರದಲ್ಲಿ ರಾವ್‌ಬ್ರಹ್ಮಂರವರ ನಿರ್ದೇಶತ್ವದಲ್ಲಿ ಅಭಿನಯಮಾಡುವಳೆಂದೂ ತಿಳಿಯಬಂದಿದೆ.

ರೇಣುಕಾ ಫಿಲ್ಮಂರವರು ಒಂದು ಸಾಮಾಜಿಕ ಚಿತ್ರವನ್ನು ತಯಾರಿಸಲು ಸಿದ್ಧತೆಗಳನ್ನು ಮಾಡುತ್ತಿರುವರೆಂದೂ, ಇದು ಶ್ರೀ ಪುಲ್ಲಯ್ಯನವರ ನಿರ್ದೇಶತ್ವದಲ್ಲಿ ತಯಾರಾಗುವದೆಂದೂ, ಇದರಲ್ಲಿ ಗಿರಿ, ಉಮಾಮಹೇಶ್ವರ್ ಮುಂತಾದವರು ಅಭಿನಯಿಸುವರೆಂದೂ ತಿಳಿದಿದೆ.

ಶ್ರೀ ವಿ. ನಾಗಯ್ಯನವರು ವಾಹಿನಿಯವರು ತಯಾರಿಸುವ 'ಭಕ್ತಪೋತನ' ಚಿತ್ರದಲ್ಲಿ ಅಭಿನಯಿಸಿ, ನಂತರ ತಮ್ಮ ಮುಂಜದ ಚಿತ್ರ 'ಅರುಂಧತಿ' (ಟಿ. ಕೆ. ಪ್ರೊಡಕ್ಷನ್) ಮುಂತಾದ ಚಿತ್ರಗಳಲ್ಲಿ ಅಭಿನಯಿಸುವರು.

ಮದರಾಸಿನಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ವಿಕ್ಟರಿ ಫಿಲ್ಮಂನಿಸವರು 'ರಾಮ ರಹೀಮ' ಎಂಬ ಒಂದು ಹಿಂದೂ ಮುಸ್ಲಿಂ ಐಕ್ಯವನ್ನು ತಯಾರಿಸುವರು.

ಈಗತಾನೇ 'ಸುಭದ್ರ' ಚಿತ್ರ ತಯಾರಿಸಿದ ಗುಬ್ಬಿ ಕಂಪೆನಿಯವರು 'ಬಸವೇಶ್ವರ' ಚಿತ್ರವೊಂದನ್ನು ಮದರಾಸಿನಲ್ಲಿ ತಯಾರಿಸುವರೆಂದು ತಿಳಿದುಬಂದಿದೆ.

ಬೆಂಗಳೂರಿಗೆ ಶ್ರೀ ಸರ್ವೋತ್ತಮ ಬಾದಾಮಿಯವರು ಬಂದಿರುವರೆಂದೂ. ಇವರಿಗೆ 'ಚಿತ್ರ ಸಮಾಚಾರ' ಪತ್ರಿಕೆಯ ಸಂಪಾದಕರು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರೆಂಬೂ ತಿಳಿಯಬರುತ್ತದೆ.